# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:17-11-2022ರಂದು ಗುರುವಾರ ಅಪರಾಹ್ನ 3-30 ಘಂಟೆಗೆ ವಿಶ್ವವಿದ್ಯಾಲಯದ ಜ್ಞಾನ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ನಡೆದ ಆನ್-ಲೈನ್ ಮೂಲಕ ನಡೆದ 2022-23ರ ಹಣಕಾಸು ವರ್ಷದ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| <u>ಹಾಜರಾದ ಸದಸ್ಯರು:</u> | | <u>ಪದನಾಮ</u> |
|---|---|---|
| 01. | **ಪ್ರೊ. ಬಿ.ಪಿ. ವೀರಭದ್ರಪ್ಪ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 02. | **ಶ್ರೀಮತಿ ಉಮಾ. ಕೆ**<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 03. | **ಶ್ರೀ ಎಂ.ಜಿ. ವೆಂಕಟೇಶಯ್ಯ**<br>ಉಪಕಾರ್ಯದರ್ಶಿಗಳು (ಉನ್ನತ ಶಿಕ್ಷಣ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 04. | **ಶ್ರೀ ಗುರುರಾಜ್ ರಾವ್**<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 05. | **ಶ್ರೀ ಜಿ. ಧರ್ಮಪ್ರಸಾದ್**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 06. | **ಶ್ರೀ ಕುಮಾರೇಗೌಡ**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 07. | **ಶ್ರೀಮತಿ ಅನುರಾಧ. ಜಿ.** ಕೆ.ಎ.ಎಸ್. (ಹಿರಿಯ ಶ್ರೇಣಿ)<br>ಕುಲಸಚಿವರು | ಸದಸ್ಯರು. |
| 08. | **ಪ್ರೊ. ಎಸ್.ಕೆ. ನವೀನ್‌ಕುಮಾರ್**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 09. | **ಶ್ರೀ ಎಸ್. ರಾಮಕೃಷ್ಣ,** ಕೆ.ಎಫ್.ಎ.ಎಸ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು ಕುವೆಂಪು ವಿಶ್ವವಿದ್ಯಾಲಯದ 2022-23ನೇ ಹಣಕಾಸು ವರ್ಷದ ವಿಶೇಷ ಹಣಕಾಸು ಸಮಿತಿ ಸಭೆಗೆ ಆನ್‌ಲೈನ್ ಮೂಲಕ ಮಾನ್ಯ ಕುಲಪತಿಗಳಿಗೆ ಮತ್ತು ಇತರೆ ಸದಸ್ಯರುಗಳಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2022-ವಿಹಸ:01: | STATUTES GOVERNING THE ESTABLISHMENT OF GAMAKA ADHYANA AND SAMSHODHANA PEETHA (CHAIR) OF KUVEMPU UNIVERSITY AT HOSAHALLI VILLAGE OF SHIMOGA DISTRICT AND CREATION OF TEACHING POSTS IN THE KENDRA ಪರಿನಿಯಮ ಅನುಮೋದನೆ ಕುರಿತು. |
| ಚರ್ಚೆ: | ಮಾನ್ಯ ಕುಲಸಚಿವರು (ಆಡಳಿತ) - ಇವರು ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿ ಗ್ರಾಮದಲ್ಲಿ ಗಮಕ ಅಧ್ಯಯನ ಪೀಠವನ್ನು ಸ್ಥಾಪಿಸಲು ಸನ್ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುತ್ತಾರೆಂದು ತಿಳಿಸಿ, ಈ ಪೀಠದ ಕುರಿತು ಸಮಗ್ರ ವಿವರಣೆಯನ್ನು ಸಭೆಗೆ ನೀಡಿದರು ಹಾಗೂ ಗಮಕ ಕಲೆಯಲ್ಲಿ ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಪದ್ಮಶ್ರೀ ಪುರಸ್ಕೃತ ಕೇಶವಮೂರ್ತಿಗಳು ಇದೇ ಊರಿನವರಾಗಿರುತ್ತಾರೆಂದು ಹೇಳಿದರು.<br><br>ಈ ಪೀಠವನ್ನು ಪ್ರಾರಂಭಿಸಲು ರಚಿಸಲಾಗಿರುವ ಪರಿನಿಯಮವು ಈಗಾಗಲೇ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನಲ್ಲಿ ಅನುಮೋದನೆಯಾಗಿರುವುದನ್ನು ಸಭೆಯ ಗಮನಕ್ಕೆ ತಂದರು. ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲು ಕೋರಿದರು.<br><br>ಸರ್ಕಾರದ ಪ್ರತಿನಿಧಿಗಳು ಮಾತನಾಡುತ್ತಾ, ಪೀಠಕ್ಕೆ ಸಂಬಂಧಿಸಿದ ವೆಚ್ಚಗಳ ಅನುದಾನದ ಬಗ್ಗೆ ವಿವರಣೆಯನ್ನು ಕೋರಿದರು. ಮಾನ್ಯ ಕುಲಸಚಿವರು ಮಾತನಾಡಿ, ಸಾರ್ವಜನಿಕರು, ಸಂಘ-ಸಂಸ್ಥೆಗಳು ಮತ್ತು ಸಂಶೋಧನಾರ್ಥಿಗಳು ದೇಣಿಗೆ ನೀಡಲು ಆಶಯ ವ್ಯಕ್ತಪಡಿಸಿರುತ್ತಾರೆಂದು ತಿಳಿಸಿ, ಸರ್ಕಾರದಿಂದಲೂ ಅನುದಾನವನ್ನು ನಿರೀಕ್ಷಿಸಿ ಪೀಠ ಸ್ಥಾಪನೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. |

| | |
|---|---|
| | ಶ್ರೀ ಧರ್ಮಪ್ರಸಾದ್, ಸಿಂಡಿಕೇಟ್ ಸದಸ್ಯರು ಹಾಗೂ ಶ್ರೀ ಕುಮಾರೇಗೌಡ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳು ಮಾತನಾಡುತ್ತಾ, ಗಮಕ ಅಧ್ಯಯನ ಪೀಠವನ್ನು ಸ್ಥಾಪಿಸಲು ಉದ್ದೇಶಿಸಿರುವ ವಿಷಯ ಇಡೀ ರಾಜ್ಯದಲ್ಲೇ ಹೆಮ್ಮೆಯ ವಿಷಯವಾಗಿದೆಯೆಂದು ತಿಳಿಸಿದರು. ವಿಶ್ವವಿದ್ಯಾಲಯದ ಕೇಂದ್ರ ಸ್ಥಾನದಲ್ಲಿ ಗಮಕ ಅಧ್ಯಯನ ಪೀಠ ಸ್ಥಾಪಿಸಿ, ಅಧ್ಯಯನ ಪೀಠಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹೊಸಹಳ್ಳಿ ಗ್ರಾಮದಲ್ಲಿ ಹಮ್ಮಿಕೊಳ್ಳಬಹುದೆಂದು ಸಲಹೆ ನೀಡಿದರು. |
| ನಿರ್ಣಯ: | STATUTES GOVERNING THE ESTABLISHMENT OF GAMAKA ADHYANA AND SAMSHODHANA PEETHA (CHAIR) OF KUVEMPU UNIVERSITY AT HOSAHALLI VILLAGE OF SHIMOGA DISTRICT AND CREATION OF TEACHING POSTS IN THE KENDRA ಈ ಪರಿನಿಯಮವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿದ ನಂತರ ಯಥಾವತ್ತಾಗಿ ಅನುಮೋದಿಸಲಾಯಿತು. |
| 2022–ವಿಹಸ:02: | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು: – ಇಲ್ಲ – |

ಅಂತಿಮವಾಗಿ, ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

| | |
|---|---|
| (ಎಸ್. ರಾಮಕೃಷ್ಣ, ಕೆ.ಎಸ್.ಎ.ಎಸ್.)<br>ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು . | ಸಹಿ/–<br>(ಪ್ರೊ. ಬಿ.ಪಿ. ವೀರಭದ್ರಪ್ಪ)<br>ಕುಲಪತಿಗಳು ಹಾಗೂ ಅಧ್ಯಕ್ಷರು. |